ಜನವಸತಿ, ವಾರ್ಡ್ ಸಭೆ ಹಾಗೂ ಗ್ರಾಮ ಸಭೆ ಮೂಲಕ 5 ವರ್ಷಕ್ಕೆ ದೂರದೃಷ್ಟಿ ಯೋಜನೆ ತಯಾರಿಸಿ ಅದರಿಂದ ವಾರ್ಷಿಕ ಯೋಜನೆಗಳನ್ನು ರೂಪಿಸುವಾಗ ಆದ್ಯತಾ ಪಟ್ಟಿ ಮಾಡುವಾಗ ಈ ಕೆಳಗಿನ ಅಂಶಗಳನ್ನು ಕೇಂದ್ರೀಕರಿಸಿ ಅಂಕಿ ಅಂಶಗಳ ನಿರ್ವಹಣೆ ಮತ್ತು ಯೋಜನಾ ಇಲಾಖೆಯು ಕ್ರಮ ಕೈಗೊಳ್ಳುವುದು.

**ಅಂಕಿ ಅಂಶಗಳ ನಿರ್ವಹಣೆ:**

1) ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳಿಗೆ ಸಂಬಂಧಿಸಿದಂತೆ ಎಲ್ಲಾ ವಿಷಯಗಳ (ಭೌಗೋಳಿಕ ಪ್ರದೇಶ, ಅರಣ್ಯ ಪ್ರದೇಶ, ಜನಸಂಖ್ಯೆ, ಕೃಷಿ ಭೂಮಿ, ಅನಕ್ಷರಸ್ಥರು, ಕೈಗಾರಿಕೆಗಳು, ಕುಟುಂಬಗಳು, ಇತ್ಯಾದಿ) ಅಂಕಿ ಅಂಶಗಳ ಕ್ರೋಢೀಕರಣ ಮಾಡುವುದು.
2) ದೂರದೃಷ್ಟಿ ಯೋಜನೆಗಳ ತಯಾರಿಸುವಿಕೆ ಮತ್ತು ಅಭಿವೃದ್ಧಿ ಪ್ರಕ್ರಿಯೆಗಳಲ್ಲಿ ಅಂಕಿ ಅಂಶಗಳನ್ನು ಬಳಸಿಕೊಳ್ಳಲು ಕ್ರಮ ವಹಿಸುವುದು.
3) ಗ್ರಾಮ ಪಂಚಾಯತಿ ಮಟ್ಟದ ಯೋಜನೆಗಳ ತಯಾರಿಕೆ ಮಾಡುವುದು.
4) ದತ್ತಾಂಶ ಮತ್ತು ಮಾಹಿತಿ ಸಂಗ್ರಹಿಸುವುದು.
5) ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಯೋಜನೆಗಳ ಅನುಷ್ಠಾನದ ಮೇಲ್ವಿಚಾರಣೆ ಮತ್ತು ಗುಣಮಟ್ಟ ಖಾತ್ರೀಕರಣ ಮಾಡುವುದು.
6) ಯೋಜನೆಗಳ ಮೌಲ್ಯಮಾಪನ ಮಾಡಲು ಅಗತ್ಯ ಕ್ರಮ ಕೈಗೊಳ್ಳುವುದು.

**ಯೋಜನೆ:**

1) ಗ್ರಾಮೀಣ ಸ್ಥಳೀಯ ಸಂಸ್ಥೆಗಳು ತಮಗೆ ನಿರ್ಧಿಷ್ಟಗೊಳಿಸಲಾಗಿರುವ ಯೋಜನೆಗಳನ್ನು ಮತ್ತು ರಾಷ್ಟ್ರೀಯ / ರಾಜ್ಯ ಮಟ್ಟದ ಕಾರ್ಯಕ್ರಮಗಳನ್ನು ಸ್ಥಳೀಯ ಸಂಪನ್ಮೂಲಗಳನ್ನು ಆಧಾರಿಸಿ ಹಾಗೂ ಆ ಕಾರ್ಯಕ್ರಮಗಳಿಗಾಗಿಯೇ ಮೀಸಲಾಗಿರುವ ಹಣವನ್ನು ಸೂಚಿಸುವ ಯೋಜನೆ.
2) ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು ಒಳಗೊಂಡಿರುವುದಷ್ಟೇ ಅಲ್ಲದೆ ರಾಜ್ಯ ವಲಯದಲ್ಲಿನ ಕಾರ್ಯಕ್ರಮವಾಗಿದ್ದು ಜಿಲ್ಲಾ ಪ್ರದೇಶದಲ್ಲಿ ಅನುಷ್ಠಾನಗೊಳ್ಳುವ ಯೋಜನೆಗಳನ್ನು ಹೊಂದಿರುತ್ತದೆ.
3) ದೂರದೃಷ್ಟಿಯುಳ್ಳ ಜನರ ಯೋಜನೆ ಮತ್ತು ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವುದಕ್ಕಾಗಿ ತಾಂತ್ರಿಕ ಮತ್ತು ವಿಷಯ ತಜ್ಞರ ತಂಡವನ್ನು ರಚಿಸುವುದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಗ್ರಾಮ ಪಂಚಾಯತಿ ಕೆ.ಡಿ.ಪಿ. ಸಭೆಗೆ ಅಂಕಿ ಅಂಶಗಳ ನಿರ್ವಹಣೆ ಮತ್ತು ಯೋಜನಾ ಇಲಾಖೆಯ ಸಂಬಂಧಪಟ್ಟ ಕ್ಷೇತ್ರಮಟ್ಟದ ಅಧಿಕಾರಿ ಮತ್ತು ಪಂಚಾಯತಿ ಅಭಿವೃದ್ಧಿ ಅಧಿಕಾರಿರವರು ನಮೂನೆ-I ರಲ್ಲಿನ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಲು ಆದೇಶಿಸಿದೆ.

(signature) 23/6/2020
(ಉಮಾ ಮಹದೇವನ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(signature)
(ಡಾ॥ ಶಾಲಿನಿ ರಜನೀಶ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ

ಗೆ:

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.

